# ಕರ್ನಾಟಕ ಸರ್ಕಾರ

*ಸಂಖ್ಯೆ:* ಪಪೂಶಿಇ/ಆಡಳಿತ–ಎ/ಉ.ವರ್ಗ **01/2016–17**

ನಿರ್ದೇಶಕರ ಕಚೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು– 560012
ದಿನಾಂಕ: 05–11–2016.

**ಜ್ಞಾ ಪ ನ**

ವಿಷಯ: 2016–17ನೇ ಸಾಲಿನಲ್ಲಿ ಉಪನ್ಯಾಸಕರ ಕೌನ್ಸಲಿಂಗ್ ಮೂಲಕ ವರ್ಗಾವಣೆ ಕುರಿತು.

ಉಲ್ಲೇಖ: 1.ಸರ್ಕಾರದ ಅಧಿಸೂಚನೆ: ಸಂವ್ಯಶಾಇ 1 ಶಾಸನ 2007 ದಿ: 01–09–2007.
2. ಸರ್ಕಾರದ ಅಧಿಸೂಚನೆ: ಇಡಿ 173 ಇಟಿಆರ್ 2007 ದಿ: 15–10–2007.
3. ಇಡಿ 37 ಇಟಿಆರ್ 2009 ದಿನಾಂಕ: 23.04.2011 ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ನಿಯಮಗಳು 2011.
4. ಈ ಕಚೇರಿಯ ಸಮ ಸಂಖ್ಯೆಯ ಸುತ್ತೋಲೆ ದಿನಾಂಕ: 24.08.2016.

–*–

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007 ರ ಅಧಿನಿಯಮ ಮತ್ತು ನಿಯಮಗಳನ್ವಯ 2016–17ನೇ ಸಾಲಿನಲ್ಲಿ ಉಪನ್ಯಾಸಕರ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸೆಲಿಂಗ್ ಮೂಲಕ ನಡೆಸಲು ಉಪನ್ಯಾಸಕರುಗಳು ಆನ್‌ಲೈನ್ ಮೂಲಕ ವರ್ಗಾವಣಾ ಅರ್ಜಿಗಳಲ್ಲಿ ಸಲ್ಲಿಸಿರುವ ವಿವರಗಳ ಆಧಾರದ ಮೇಲೆ ತಾತ್ಕಾಲಿಕ ಆದ್ಯತಾ ಪಟ್ಟಿಯನ್ನು ಇಲಾಖಾ ಅಂತರ್ ಜಾಲದಲ್ಲಿ ದಿನಾಂಕ : 06.10.2016 ಪ್ರಕಟಿಸಲಾಗಿದೆ.

ಸದರಿ ತಾತ್ಕಾಲಿಕ ಆದ್ಯತಾ ಪಟ್ಟಿಗೆ ದಿನಾಂಕ :03.11.2016 ರ ಸಂಜೆ 4:30ರ ಒಳಗಾಗಿ ಸ್ವೀಕರಿಸಲಾದ ಎಲ್ಲಾ ಆಕ್ಷೇಪಣೆಗಳನ್ನು ಪರಿಗಣಿಸಲಾಗಿದೆ ಹಾಗೂ ವಿಷಯವಾರು ಅಂತಿಮ ಆದ್ಯತಾ ಪಟ್ಟಿಯನ್ನು ಇಲಾಖಾ ಅಂತರ್‌ಜಾಲದಲ್ಲಿ ಪ್ರಕಟಿಸಿದೆ. ಸದರಿ ಅಂತಿಮ ಪಟ್ಟಿಯಲ್ಲಿ ವೇಯಿಟೇಜ್ ಅಂಕಗಳನ್ನು ಪರಿಗಣಿಸಲು ಅರ್ಜಿ ಸಲ್ಲಿಸಿದ ಎಲ್ಲಾ ಉಪನ್ಯಾಸಕರುಗಳಿಗೆ ದಿನಾಂಕ : 31.08.2016 ಕ್ಕೆ ಅಂತ್ಯಗೊಂಡಂತೆ ಪರಿಗಣಿಸಲಾಗಿರುತ್ತದೆ.

ಅಂತಿಮ ಆದ್ಯತಾ ಪಟ್ಟಿಯಲ್ಲಿನ ಅರ್ಹ ಉಪನ್ಯಾಸಕರುಗಳಿಗೆ ಗಣಕೀಕೃತ ಕೌನ್ಸೆಲಿಂಗ್‌ನ್ನು ಈ *ದಿನಾಂಕ:08.11.2016 ರಿಂದ 11.11.2016 ರ ವರೆಗೆ ಬೆಳಗ್ಗೆ 9:00 ಘಂಟೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012* ಇಲ್ಲಿ ಕೆಳಕಂಡಂತೆ ನಿಗದಿಪಡಿಸಿರುವ ವೇಳಾಪಟ್ಟಿಯಂತೆ ನಡೆಸಲಾಗುವುದು. ಅರ್ಹ ಉಪನ್ಯಾಸಕರುಗಳು ಸಮಯಕ್ಕೆ ಸರಿಯಾಗಿ ಕೌನ್ಸೆಲಿಂಗ್‌ಗೆ ಈಗಾಗಲೇ ಸುತ್ತೋಲೆಯಲ್ಲಿ ತಿಳಿಸಿರುವ ಮೂಲ ದಾಖಲೆಗಳೊಂದಿಗೆ(ಕಡ್ಡಾಯವಾಗಿ ಖಾಯಂ ಪೂರ್ವ ಸೇವಾ ಅವಧಿ ಪೂರ್ಣಗೊಂಡಿರುವ ಆದೇಶದ ಪ್ರತಿಯೊಂದಿಗೆ) *ಗುರುತಿನ ಚೀಟಿ/ವೇತನ ದೃಢೀಕರಣ ಪತ್ರದೊಂದಿಗೆ*

ಹಾಜರಾಗಲು ತಿಳಿಸಿದೆ. ಪರಸ್ಪರ ವರ್ಗಾವಣೆ ಕೋರಿರುವ ಉಪನ್ಯಾಸಕರು ದಿನಾಂಕ: **11.11.2016ರಂದು** ಸಮಯ **4.00 ಗಂಟೆಗೆ** ಕೌನ್ಸೆಲಿಂಗ್‌ನಲ್ಲಿ ಹಾಜರಾಗಲು ಸೂಚಿಸಿದೆ.

| ದಿನಾಂಕ | ಬೆಳಗ್ಗೆ 09:00 ರಿಂದ 1:00 ರವರೆಗೆ | ಮಧ್ಯಾಹ್ನ 2:00 ರಿಂದ ಮುಗಿಯುವವರೆಗೆ |
|---|---|---|
| 08.11.2016 ಮಂಗಳವಾರ | ಕನ್ನಡ. ಸಂಸ್ಕೃತ, ಉರ್ದು, ಹಿಂದಿ, ಶಿಕ್ಷಣ, ಭೂಗೋಳಶಾಸ್ತ್ರ | ವಾಣಿಜ್ಯಶಾಸ್ತ್ರ, ಗಣಕ ವಿಜ್ಞಾನ, ಎಲೆಕ್ಟ್ರಾನಿಕ್ಸ್, |
| 09.11.2016 ಬುಧವಾರ | ರಸಾಯನಶಾಸ್ತ್ರ, ಗಣಿತ. | ಇಂಗ್ಲೀಷ್ |
| 10.11.2016 ಗುರುವಾರ | ಜೀವಶಾಸ್ತ್ರ, ಸಮಾಜಶಾಸ್ತ್ರ. | ರಾಜ್ಯಶಾಸ್ತ್ರ |
| 11.11.2016 ಶುಕ್ರವಾರ | ಭೌತಶಾಸ್ತ್ರ, ಅರ್ಥಶಾಸ್ತ್ರ. | ಇತಿಹಾಸ |

ಕೌನ್ಸೆಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ಉಪನ್ಯಾಸಕರು ಮಾರ್ಚ್ 2017ರ ದ್ವಿತೀಯ ಪಿಯುಸಿ ಪರಿಕ್ಷಾ ಕಾರ್ಯ ಮುಗಿದ ನಂತರ ಆಯ್ಕೆ ಮಾಡಿಕೊಂಡ ಸ್ಥಳಕ್ಕೆ ಹಾಜರಾಗಲು ಅನುಮತಿಸಲಾಗುವುದು.

ಜಂಟಿ ನಿರ್ದೇಶಕರು (ಆಡಳಿತ)
ಪದವಿ ಪೂರ್ವ ಶಿಕ್ಷಣ ಇಲಾಖೆ.